

(6ನೇ ಪುಟದಿಂದ)

ಹಿರಂಡೊ ಫ್ಲುವಿಕೊಲಾ ಕುಟುಂಬಕ್ಕೆ ಸೇರಿರುವ ಸ್ವಾಲೊ ಹಕ್ಕಿಗಳನ್ನು 'ಮಡ್ ಸ್ವಾಲೊ', 'ಇಂಡಿಯನ್ ಕ್ಲಿಪ್', 'ಸ್ಟ್ರೀಕ್–ಥ್ರೋಟೆಡ್ ಸ್ವಾಲೊ'– ಹೀಗೆ ವಿವಿಧ ಹೆಸರುಗಳಿಂದ ಕರೆಯಲಾಗುತ್ತದೆ. ಗುಂಪು ಗುಂಪಾಗಿ ವಾಸಿಸುವ ಇವು ನೀರಿನ ಪಸೆ ಇರುವ ಸ್ಥಳದಲ್ಲಿನ ಬಂಡೆ ಇಲ್ಲವೆ, ಎತ್ತರದ ಸೇತುವೆಗಳ ಕೆಳಗೆ ಗೂಡು ಕಟ್ಟುತ್ತವೆ.

ನವೆಂಬರ್‌ನಿಂದ ಇವು ಗೂಡು ಕಟ್ಟಲು ಆರಂಭಿಸುತ್ತವೆ. ಕೆಸರಿನ ಉಂಡೆಯನ್ನು ಕೊಕ್ಕಿನಲ್ಲಿ ಸಂಗ್ರಹಿಸಿ ಬಟ್ಟಲಿನಾಕಾರದ ಗೂಡು ರಚಿಸುತ್ತವೆ. ಒಂದು ತಿಂಗಳು ಸತತ ಶ್ರಮ ವಹಿಸಿ ಮನೆ ಕಟ್ಟಿಕೊಳ್ಳುತ್ತವೆ. ಈ ಮಣ್ಣಿನ ಮನೆಯ ಒಳಕ್ಕೆ ಹೋಗಿ ಬರಲು ಕುಶಲ ಕುಂಬಾರನಂತೆ ಒಂದು ಪ್ರವೇಶ ದ್ವಾರವನ್ನು ರಚಿಸುತ್ತವೆ.

**ವಂಶಾಭಿವೃದ್ಧಿ:** ಮನೆ ಕಟ್ಟಿದ ಬಳಿಕ ಅದರಲ್ಲಿ ಸಂಸಾರ ಹೂಡುವ ಸ್ವಾಲೊ ಜೋಡಿ ಮಾರ್ಚ್, ಏಪ್ರಿಲ್ ತಿಂಗಳಿನಲ್ಲಿ ಸಂತಾನಾಭಿವೃದ್ಧಿ ಕ್ರಿಯೆಯಲ್ಲಿ ತೊಡಗುತ್ತವೆ. ಒಂದು ಹೆಣ್ಣು ಸ್ವಾಲೊ ಹಕ್ಕಿ ಎರಡರಿಂದ ಮೂರು ಮೊಟ್ಟೆಗಳನ್ನು ಇಡುತ್ತದೆ. ಮೊಟ್ಟೆಗೆ ಕಾವು ಕೊಡುವ ಕೆಲಸವನ್ನು ಹೆಣ್ಣು ಹಕ್ಕಿ ಮಾಡಿದರೆ ಗಂಡು ಹಕ್ಕಿ ಅದಕ್ಕೆ ಆಹಾರ ಪೂರೈಸುತ್ತದೆ. ಕಾವು ಕೊಡಲು ಶುರು ಮಾಡಿದ 20 ದಿನಗಳಲ್ಲಿ ಮೊಟ್ಟೆಯೊಡೆದು ಮರಿಗಳು ಹೊರ ಬರುತ್ತವೆ. ಆಗ ಹೆಣ್ಣು ಮತ್ತು ಗಂಡುಗಳೆರಡೂ ಮರಿಗಳ ಆರೈಕೆಯಲ್ಲಿ ತೊಡಗುತ್ತವೆ.

ಹಾರುವ ಚಿಟ್ಟೆ, ಸಣ್ಣ ಕೀಟಗಳು ಸ್ವಾಲೊ ಹಕ್ಕಿಯ ಮುಖ್ಯ ಆಹಾರ. ಹಾರುತ್ತಲೇ ಇವು ತಮ್ಮ ಆಹಾರವನ್ನು ಚುರುಕಾಗಿ ಬೇಟೆಯಾಡುತ್ತವೆ. ದಿನದ ಹೆಚ್ಚು ಸಮಯ ಇವು ಗಾಳಿಯಲ್ಲೇ ತೇಲುತ್ತಿರುತ್ತವೆ. ಗೂಡು ಕಟ್ಟುವ ಮತ್ತು ಮರಿಗಳಿಗೆ ಆಹಾರ ನೀಡುವ ಸಂದರ್ಭದಲ್ಲಿ ಮಾತ್ರ ಕೆಳಕ್ಕೆ ಇಳಿಯುತ್ತವೆ.



**ಸುಂದರ ಹಕ್ಕಿ:** ಸ್ವಾಲೊ ಬರ್ಡ್ ಅತ್ಯಂತ ಪುಟ್ಟ ಹಾಗೂ ಸುಂದರವಾದ ಹಕ್ಕಿ. ನೀಲಿ ಮಿಶ್ರಿತ ಕಪ್ಪು ಬಣ್ಣದ ಈ ಪಕ್ಷಿಯ ಕಿರೀಟ ಭಾಗ ಕಂದು ಬಣ್ಣದಿಂದ ಕೂಡಿದೆ. ಕತ್ತರಿ ಆಕಾರದ ರೆಕ್ಕೆಗಳನ್ನು ಹೊಂದಿರುವ ಇದರ ಕಿಬ್ಬೊಟ್ಟೆ ಬಿಳಿ ಬಣ್ಣದಿಂದ ಕೂಡಿದೆ. ತೀಕ್ಷ್ಣವಾದ ಕಣ್ಣುಗಳ ಸ್ವಾಲೊ ರಾಕೆಟ್‌ನಂತೆ ಗಾಳಿಯಲ್ಲಿ ವೇಗವಾಗಿ ತೇಲಿ ಹೋಗುತ್ತದೆ. ರಂಗನತಿಟ್ಟು ಪಕ್ಷಿಧಾಮದ ದಕ್ಷಿಣ ಭಾಗದಲ್ಲಿ ನೈಸರ್ಗಿಕ ದೋಣಿಯಂತೆ ಕಾಣುವ ಕಲ್ಲು ಬಂಡೆಗಳ ಕೆಳಗೆ ಈ ಹಕ್ಕಿಗಳ ನೂರಾರು ಗೂಡುಗಳನ್ನು ನೋಡುವುದೂ ಒಂದು ಸುಂದರ ಅನುಭವ.